# ಎಗ್‌ಲೆಸ್ ಕೇಕ್ ಮನೆಯಲ್ಲೇ ಬೇಕ್..!

ಕೇಕ್ ಎಂದರೆ ಯಾರಿಗೆ ತಾನೆ ಇಷ್ಟವಿಲ್ಲ ಹೇಳಿ? ರುಚಿ ರುಚಿಯಾದ ಮೃದುವಾದ ಕೇಕ್ ಬಾಯಲ್ಲಿಟ್ಟರೆ ಕರಗಿ ಮನಸ್ಸಿಗೆ ಹಿತವಾದ ಅನುಭವ ನೀಡುತ್ತದೆ. ಸಾಮಾನ್ಯವಾಗಿ ಬೇಕರಿಗಳಲ್ಲೇ ಈ ಕೇಕ್ ಬೇಕರಿಯಲ್ಲೇ ತಯಾರಾಗುತ್ತದೆ. ಆದರೆ ಶಿರಸಿಯ ಅನುಷಾ ಜೋಶಿ ಹಲವು ವೈವಿಧ್ಯಗಳ ಎಗ್‌ಲೆಸ್ ಕೇಕ್‌ಗಳನ್ನು ಮನೆಯಲ್ಲೇ ತಯಾರಿಸುತ್ತಾರೆ.

■ ಸೌಖ್ಯಮೋಹನ್ ತಲಕಾಲುಕೊಪ್ಪ

■ ಚಿತ್ರಗಳು: ಅನುಷಾ ಜೋಶಿ




ಅನುಷಾ ಜೋಶಿ



ಕೇಕ್, ಪಫ್, ಬ್ರೆಡ್ ಇತ್ಯಾದಿ ಬೇಕರಿ ತಿನಿಸುಗಳನ್ನು ನಮಗೆಲ್ಲಿ ಬೇಕರಿಯವರ ರೀತಿ ಚೆನ್ನಾಗಿ ತಯಾರಿಸಲು ಆಗುತ್ತದೆ? ಅದಕ್ಕೆ ವಿಶೇಷ ತರಬೇತಿ ಬೇಕು, ಅದು ನಮಗೆ ಹೇಳಿ ಮಾಡಿಸಿದ್ದಲ್ಲ ಅಂತ ಕೆಲವು ಗೃಹಿಣಿಯರು ಅಂದುಕೊಳ್ಳುತ್ತಾರೆ. ಬೇಕರಿಯಿಂದ ತಂದು ಸವಿಯುತ್ತಾರೆ. ಆದರೆ ನನ್ನ ಹತ್ತಿರ ಅವರಷ್ಟು ಚೆನ್ನಾಗಿ ಕೇಕ್ ತಯಾರಿಸಲು ಯಾಕೆ ಆಗುವುದಿಲ್ಲ ಅಂತ ಛಲದಿಂದ ಮುನ್ನುಗ್ಗುವವರು ಬಹಳ ಕಡಿಮೆ. ಜೊತೆಗೆ ಇದನ್ನು ಮನೆಕೆಲಸ, ಮಕ್ಕಳ ನಿರ್ವಹಣೆಯೊಟ್ಟಿಗೆ ವೃತ್ತಿಯಾಗಿ ನೋಡುವವರು ಕೆಲವೇ ಕೆಲವರು. ಅಂತಹವರಲ್ಲೊಬ್ಬರು ಉತ್ತರ ಕನ್ನಡದ ಶಿರಸಿಯ ಅನುಷಾ ಜೋಶಿ.

ಇವರಿಗೆ ಸುಮಾರು ಆರು ವರ್ಷಗಳ ಹಿಂದೆ ವನಿತಾ ಸಮಾಜದ ಕುಕ್ಕಿಂಗ್ ಕ್ಲಾಸ್‌ನಲ್ಲಿ ಹೇಳಿಕೊಟ್ಟ ಹಲಸಿನ ಹಣ್ಣಿನ ಕೇಕು ನೋಡಿ ಆಸಕ್ತಿ ಮೂಡಿತು. ಆ ರೆಸಿಪಿಯನ್ನು ಬರೆದುಕೊಂಡು ಮನೆಯಲ್ಲೇ ತಯಾರಿಸಿದರು. ಸರಿ ಬರಲಿಲ್ಲ. ಅಲ್ಲಿಗೆ ಬಿಡಲಿಲ್ಲ ಅವರ ಪ್ರಯತ್ನ. ಹಲವಾರು ಬಾರಿ ಛಲ ಬಿಡದೆ ಪ್ರಯತ್ನಿಸಿ ಕೊನೆಗೂ ಪಕ್ಕಾ ಕೇಕ್ ತಯಾರಿಸಿದರು. ಪರ್ಫೆಕ್ಟ್ ಎನಿಸುವವರೆಗೂ ಅವರ ಗುರಿ ಬಿಡಲಿಲ್ಲ. ಜೊತೆಗೆ ನೆಟ್‌ನಲ್ಲಿಯೂ ಯೂಟ್ಯೂಬ್ ಹಾಗೂ ಕೆಲವೊಂದು ಒಳ್ಳೆಯ ಬ್ಲಾಗ್‌ನಲ್ಲಿರುವ ಕೆಲವು ರೆಸಿಪಿಗಳು ಕೇಕಿನ ಹದವನ್ನು ಸರಿ ಮಾಡಿದವು. ಕೇಕ್ ತಯಾರಿಕೆಗೆ ಬೇಕಾಗುವ ಸಾಮಗ್ರಿಗಳು ಬೇಕಿಂಗ್ ಪೌಡರ್, ಐಸಿಂಗ್ ಶುಗರ್, ಕ್ರೀಮ್ ಇತ್ಯಾದಿ ಶಿರಸಿಯಲ್ಲಿ ಲಭ್ಯ. ಉಳಿದದ್ದೆನ್ನೆಲ್ಲಾ ಹುಬ್ಬಳ್ಳಿಯಿಂದ ತರಿಸುತ್ತಾರೆ. ಕೇಕಿಗೆ ಅಲಂಕಾರ ಮಾಡಲು ಬಳಸುವ ವಸ್ತುಗಳನ್ನು ನಾಸಲ್ಸ್, ಸ್ಪ್ಯಾಚುಲಾ, ಪೈಪಿಂಗ್ ಬ್ಯಾಗ್, ಕೆಲವೊಂದು ಮೌಲ್ಡ್ ಆನ್‌ಲೈನ್‌ನಲ್ಲೇ ಕೊಳ್ಳುತ್ತಾರೆ.

### ಕೇಕಿನ ವಿಶೇಷತೆ

ಇವರ ಕೇಕಿನ ಫೋಟೋಗಳನ್ನು ನೋಡಿ ಇವರಲ್ಲಿ ಕೇಕ್ ತಯಾರಿಸಲು ಬೇಕಾಗುವ ಆಧುನಿಕ ಉಪಕರಣಗಳು (ಮೈಕ್ರೋವೇವ್, ಓಟಿಜಿ ಇತ್ಯಾದಿ) ಇವೆ ಎಂದು ಭಾವಿಸಿದ್ದೀರಾ? ಖಂಡಿತಾ ಇಲ್ಲ. ಈಗಲೂ ಅವರು ಕೇಕ್ ತಯಾರಿಸುವುದು ಕುಕ್ಕರಿನಲ್ಲಿಯೇ. ಮೃದುವಾಗಿ, ಒಳ್ಳೆಯ ಹದದ ಕೇಕ್ ತಯಾರಿಸುವಷ್ಟು ಪರಿಣತಿ ಸಿದ್ಧಿಸಿದೆ ಇವರಿಗೆ.

ಮೊಟ್ಟೆರಹಿತ ಕೇಕ್‌ಗಳು ಇವರ ಕೇಕಿನ ಇನ್ನೊಂದು ವಿಶೇಷ. ಇವರು